A.—Sri K. V. SHANKARA GOWDA (Minister for Agriculture and Education).—

No. Existing rules are considered sufficient to protect the interest of teachers.

ಶ್ರೀ ವೈ. ಎಸ್. ಪಾಟೀರ್.—ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿರುವ ಶಿಕ್ಷಕರಿಗೆ ಬರುತ್ತಿರುವ ಸಂಬಳದಲ್ಲಿ ಶೇಕಡ 25, 30, 50ರಷ್ಟು ಇನ್ನೂ ಕೊಟ್ಟಿಲ್ಲವೆಂಬುದಾಗಿ ಶಿಕ್ಷಕರಿಂದ ದೂರು ಬಂದಿವೆಯೇ?

ಶ್ರೀ ಕೆ. ವಿ. ಶಂಕರಗೌಡ.—ಕೆಲವು ದೂರುಗಳು ಬಂದಿವೆ. ಅವುಗಳ ವಿಚಾರದಲ್ಲಿ ಸೂಕ್ತ ಕ್ರಮವನ್ನು ತೆಗದುಕೊಳ್ಳಲಾಗಿದೆ.

ಶ್ರೀ ವೈ. ಎಸ್. ಪಾಟೀರ್.—ಖಾಸಗೀ ಶಾಲೆಗಳಲ್ಲಿ 3-4 ವರ್ಷಗಳವರೆಗೆ ದುಡಿದವರಿಗೆ ಇನ್ನೂ ಸಂಬಳ ಕೊಡದೆ ಇರುವಾಗ ಶಾಲೆ ಬಿಟ್ಟು ಹೋಗಿ ಎಂಬುದಾಗಿ ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅವರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಕೆ. ವಿ. ಶಂಕರಗೌಡ.—ಒಕಾಏಕಿ ಶಿಕ್ಷಕರನ್ನು ಶಾಲೆ ಬಿಟ್ಟು ಹೋಗಿ ಎಂಬುದಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಅವರನ್ನು ತೆಗೆದುಹಾಕುವುದಕ್ಕೆ ನಿಯಮಗಳುಂಟು. ಅವನ್ನು ಅನುಸರಿಸಬೇಕು. ಅವರನ್ನು ತೆಗೆದುಹಾಕುವುದು ಅಷ್ಟು ಸುಲಭದ ಕೆಲಸವಲ್ಲ.

ಶ್ರೀ ವೈ. ಎಸ್. ಪಾಟೀರ್.—ಹೊಸಪೇಟೆ ಮುನಿಸಿಪಾಲಿಟಿಯವರು ನಡೆಸುವಂಥ ಸೆಕೆಂಡರಿ ಸ್ಕೂಲಿನಲ್ಲಿ ಕೆಲಸಮಾಡುವ 2-3 ಜನ ಶಿಕ್ಷಕರಿಗೆ ಅಲ್ಲಿನ ಮುನಿಸಿಪಲ್ ಕಮಿಷನರ್ ಅವರು ನಿಮ್ಮನ್ನು ಸರ್ವಿಸಿನಿಂದ ಜೂನ್ ತಿಂಗಳಿಂದ ತೆಗೆದುಹಾಕುತ್ತೇವೆ, ಆಮೇರೆ ನೀವು ಬೇರೆ ಹೇಗೆ ಇಲ್ಲವೆಂದು ಅವರನ್ನು ಸರ್ವಿಸಿನಿಂದ ತೆಗೆದುಹಾಕಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ವಿ. ಶಂಕರಗೌಡ.—ಅವರನ್ನು ಯಾವ ಕಾರಣಕ್ಕಾಗಿ ತೆಗೆದುಹಾಕಿದ್ದಾರೆಂಬುದರ ಬಗ್ಗೆ ನನ್ನ ಮುಂದೆ ಮಾಹಿತಿ ಇಲ್ಲ. ಅದರ ಬಗ್ಗೆ ಬೇರೆ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದರೆ ಉತ್ತರ ಹೇಳುತ್ತೇನೆ.

Popularising Kannada Typewriters

45. Sri M. C. NARASIMHAN (Legislative Assembly Constituency).—

Will the Minister for Agriculture and Education be pleased to state :—

(*a*) whether representations were/have been made by persons concerned in commercial education that encouragement be given for popularising Kannada Typewriters ;

(*b*) the steps taken to popularise the use of Kannada Typewriters ?

A.—Sri K. V. SHANKARA GOWDA (Minister for Agriculture and Education).—

(*a*) No.

(*b*) The following are the steps taken for popularising Kannada Typewriter :

(*i*) Mysore State Secondary Education and Examinations Board conducted the first examination in Kannada Typewriting in

November 1967. This has given encouragement for more students and others to learn Kannada Typewriting. The number of Commerce institutes, teaching Kannada Typewriting has also increased after this examination.

(*ii*) Government have sanctioned allowances to Officials who passed Kannada Typewriting Examination.

(*iii*) The design of the standardised key board has been made available to all manufacturers free of cost.

ಶ್ರೀ ಎಂ. ಸಿ. ನರಸಿಂಹನ್.—ಒಂದು ಕನ್ನಡ ಟೈಪ್‌ರೈಟರ್‌ಗೆ ಎಷ್ಟು ಖರ್ಚಾಗುತ್ತದೆಂಬ ಬಗ್ಗೆ ಅಂಕಿ ಅಂಶಗಳನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಆ ವಿಷಯ ನನ್ನಲ್ಲಿಲ್ಲ.

ಶ್ರೀ ಎಂ. ಸಿ. ನರಸಿಂಹನ್.—ಸುಮಾರು 1600 ರೂಪಾಯಿಗಳವರೆಗೆ ಒಂದು ಕನ್ನಡ ಟೈಪ್‌ರೈಟರ್‌ಗೆ ಖರ್ಚು ತಗುಲುವುದರಿಂದ ಖಾಸಗಿ ವಾಣಿಜ್ಯ ಸಂಸ್ಥೆಗಳವರು ಹಣದ ಅಭಾವದಿಂದ ಅದನ್ನು ಕೊಂಡುಕೊಂಡು ಕನ್ನಡ ಟೈಪ್‌ರೈಟಿಂಗ್‌ನಲ್ಲಿ ಶಿಕ್ಷಣ ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಸರ್ಕಾರದವರು ಅದಕ್ಕೆ ಬೇಕಾದ ಸಾಲವನ್ನು ಕೊಡಲೇ ಆ ಸಂಸ್ಥೆಗಳಿಗೆ ಒದಗಿಸಿ ಕೊಡಬೇಕೆಂದು ಅಂತಹ ಸಂಸ್ಥೆಗಳ ಮೊಟಿಂಗ್‌ನಲ್ಲಿ ತೀರ್ಮಾನವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅದೇನೂ ನನ್ನ ಗಮನಕ್ಕೆ ಬಂದಿಲ್ಲ. ಎರಡು ವಾಣಿಜ್ಯ ಸಂಸ್ಥೆಗಳು ಕನ್ನಡ ಟೈಪ್‌ರೈಟಿಂಗ್‌ಗಳನ್ನು ಕೊಂಡುಕೊಳ್ಳುವದಕ್ಕೆ ಸಾಲ ಕೊಡಬೇಕೆಂದು ಸರ್ಕಾರಕ್ಕೆ ಅರ್ಜಿ ಹಾಕಿವೆ. ಸರ್ಕಾರದ ನಿಯಮಾವಳಿ ಪ್ರಕಾರ ಆ ರೀತಿ ಸಾಲ ಕೊಡುವುದಕ್ಕೆ ಈಗ ಸಾಧ್ಯವಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಕನ್ನಡ ಟೈಪ್‌ರೈಟರ್‌ಗಳನ್ನು ರಾಜ್ಯದ ಪ್ರತಿಯೊಂದು ತಾಲ್ಲೂಕು ಆಫೀಸಿಗೆ ಕೊಡುವುದಕ್ಕೆ ಸರ್ಕಾರದವರು ಆಲೋಚನೆ ಮಾಡುತ್ತಾರೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಆಲೋಚನೆ ಮಾಡೋಣ.

Sri V. SRINIVASA SHETTY.—In answer to (b), it is stated that Government have sanctioned allowances to officials who passed Kannada Typewriting Examination. May I know the quantum of allowances given to these officials who have passed Kannada Typewriting ?

Sri K. V. SHANKARA GOWDA.—For First Division Clerks, who have passed Kannada Shorthand and Typewriting, a Special Pay of Rs. 30 p. m. and for Second Division Clerks, who have passed Kannada Shorthand and Typewriting, a Special Pay of Rs. 20 p. m.

Sri V. SRINIVASA SHETTY.—A few Kannada Reporters in the Legislature Secretariat have passed these examinations. Will the Government give any Special allowance to these people ?

Sri K. V. SHANKARA GOWDA.—I do not know whether they are getting any allowance or not. If they are not getting, it is a matter for consideration.

ಶ್ರೀ ಎಂ. ವಿ. ವೆಂಕಟಪ್ಪ.—ರಾಜ್ಯದ ಪ್ರತಿಯೊಂದು ತಾಲ್ಲೂಕು ಕಚೇರಿಯಲ್ಲಿ ಕನ್ನಡದಲ್ಲಿಯೇ ವ್ಯವಹಾರ ನಡೆಯುತ್ತಿದೆ. ಆದ್ದರಿಂದ ಕೆಲವು ತಾಲ್ಲೂಕು ಬೋರ್ಡಿನವರು ಕನ್ನಡ ಟೈಪ್‌ರೈಟರ್ಸ್ ಬೇಕು, ಅದಕ್ಕಾಗಿ ಸರ್ಕಾರದವರು ಸಬ್ಸಿಡಿ ಕೊಡಬೇಕೆಂದು ಕೇಳಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಆ ರೀತಿ ಕೇಳಿರಬಹುದು. ಆದರೂ ತಾಲ್ಲೂಕು ಬೋರ್ಡಿನವರು ಅದನ್ನು ಕೊಂಡುಕೊಳ್ಳಬೇಕು.

ಶ್ರೀ ಪ್ಲೆ. ಎಸ್. ವಾಟೀಲ್.—ಕನ್ನಡ ಟೈಪ್‌ರೈಟಿಂಗ್‌ನಲ್ಲಿ ತೇರ್ಗಡೆಯಾದವರಿಗೆ ನೌಕರಿಯಲ್ಲಿ ಫಸ್ಟ್‌ಪ್ರಿಫರೆನ್ಸ್ ಕೊಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಕನ್ನಡ ಟೈಪ್‌ರೈಟಿಂಗ್‌ನಲ್ಲಿ ಉತ್ತೀರ್ಣರಾಗಿ ಬರತಕ್ಕ ಅಭ್ಯರ್ಥಿಗಳಿಗೆ ಬಹುಶಃ ಪ್ರಿಫರನ್ಸ್ ಕೊಡಬಹುದು.

Sri V. SRINIVASA SHETTY.—Regarding Kannada Reporters, the Hon'ble Minister was pleased to say that it is a matter for consideration. In answer to (b) it is stated that Government have sanctioned allowance to officials who have passed Kannada Typewriting examination. Will not the Kannada Reporters of Mysore Legislature come under the category of these officials ?

Sri K. V. SHANKARA GOWDA.—I have no information to that effect.

Sri V. SRINIVASA SHETTY.—Am I to understand that the Government does not have information about Legislature ?

Sri K. V. SHANKARA GOWDA.—At present I have no information.

Sri V. SRINIVASA SHETTY.—Am I to understand that if they are not getting, they will be getting it under this order ?

Sri K. V. SHANKARA GOWDA.—Yes, Sir.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಖಾಸಗೀ ಸಂಸ್ಥೆಗಳು ಕನ್ನಡ ಟೈಪ್‌ರೈಟರ್‌ಗಳನ್ನು ಕೊಂಡು ಕೊಳ್ಳಬೇಕಾದರೆ ಈಗ ಸರ್ಕಾರದಿಂದ ಹಣಸಹಾಯ ಪಡೆಯಲು ಕಾನೂನಿನಲ್ಲಿ ಸಾಧ್ಯವಿಲ್ಲವೆಂದು ಅಪ್ಪಣೆಯಾಯಿತು. ಈಗ ರತಕ್ಕ ಕೈಗಾರಿಕಗಳ ಸಂಬಂಧವಾಗಿ ಸಾಲ ಕೊಡುವಾಗ ಆ ಸಾಲಕ್ಕೆ ಸಂಬಂಧವಾಗಿರತಕ್ಕ ವಿಧಿನಿಯಮಗಳನ್ನು ಸಡಿಲಿಸಿ ಆ ಸಂಸ್ಥೆಗಳವರಿಗೆ ಬೇಕಾದಷ್ಟು ಸಾಲವನ್ನು ಕೊಡುವುದಕ್ಕೆ ಸರ್ಕಾರಕ್ಕೆ ಇರುವ ಕಷ್ಟವೇನು ?

ಶ್ರೀ ಕೆ. ವಿ. ಶಂಕರಗೌಡ.—ಸರ್ಕಾರಕ್ಕೆ ಸಾಲ ಕೊಡುವುದಕ್ಕೇನೂ ಕಷ್ಟವಾಗುವುದಿಲ್ಲ. ಆದರೆ ಆ ಸಂಸ್ಥೆಗಳು ಇಂಗ್ಲಿಷ್ ಟೈಪ್‌ರೈಟರ್‌ಗಳನ್ನು ಕೊಂಡಹಾಗೆ ಕನ್ನಡ ಟೈಪ್‌ರೈಟರ್ಸ್‌ನ್ನು ಅವರ ಸ್ವಂತ ಖರ್ಚಿನಿಂದಲೇ ಕೊಂಡುಕೊಳ್ಳಬೇಕು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಕನ್ನಡ ಟೈಪ್‌ರೈಟರ್ಸ್‌ನ್ನು ಎಲ್ಲಾ ಸಂಸ್ಥೆಗಳವರೂ ಕೊಂಡ ಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಯಾವ ಕನ್ನಡ ಟೈಪ್‌ರೈಟರ್ಸ್ ಇಟ್ಟುಕೊಳ್ಳಲಿಚ್ಛಿಸುವವರೋ ಅವರಿಗೆ ಅವನ್ನು ಸಾಲದ ರೂಪದಲ್ಲಿ ಕೊಡಬೇಕೆಂದು ಸರ್ಕಾರದವರೇ ನಿರ್ಧಾರ ಮಾಡಿ ಜವಾಬ್ದಾರಿ ತೆಗೆದುಕೊಂಡು ಕೊಡಿಸುವುದು ಒಳ್ಳೆಯದಲ್ಲವೇ ? It is one of the inducements. Would you say that it is not a much needed incentive to be given ?

Sri K. V. SHANKARA GOWDA.—I do not know whether this sort of encouragement should be given or not. It is a good suggestion ; it will be examined.

ಶ್ರೀ ಜಿ. ವಿ. ಅಂಜನಪ್ಪ.—ತಾವು ಅಡಳಿತ ಭಾಷೆ ಕನ್ನಡ ಆಗಬೇಕು. ಅದಕ್ಕೆ ಉತ್ತೇಜನ ಕೊಡಬೇಕೆಂದು ಹೇಳುತ್ತಿದ್ದೀರಿ. ಕನ್ನಡ ಟೈಪ್‌ರೈಟರ್ಸನ್ನು ಕೊಂಡು ಕೊಂಡು ಪಾಪ್ಯುಲರೈಜ್ ಮಾಡುವುದಕ್ಕೆ ಪ್ರಯತ್ನ ಪಡುವ ಬದಲಿಗೆ ಸರ್ಕಾರ ಉತ್ತೇಜನವನ್ನು ಕೊಡಬಾರದು ?

ಶ್ರೀ ಕೆ. ವಿ. ಶಂಕರಗೌಡ.—ಕನ್ನಡ ಅಡಳಿತ ಭಾಷೆಯಾದರೆ, ಅವರೇ ತಾವಾಗಿಯೇ ಅದನ್ನು ಕೊಂಡುಕೊಳ್ಳುತ್ತಾರೆ.

ಶ್ರೀ ಜಿ. ವಿ. ಅಂಜನಪ್ಪ.—ಕನ್ನಡ ಭಾಷೆ ಅಡಳಿತಭಾಷೆಯಾಗಲಿಲ್ಲವೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಕನ್ನಡ ಅಡಳಿತ ಭಾಷೆಯಾಗಲಿಕ್ಕೆ ಬೇಕಾದ ಕಾನೂನುಗಳನ್ನು ಮಾಡಿದ್ದೇವೆ, ಅವೆನ್ನೂ ಜಾರಿಗೆ ಬಂದಿಲ್ಲ.

ಶ್ರೀ ಜಿ. ವಿ. ಅಂಜನಪ್ಪ.—ನಿಮ್ಮ ಕೆಲಸವನ್ನು ಅವರೇ ಮಾಡುತ್ತೇವೆಂದು ಹೇಳಿದರೆ ಅವರಿಗೆ ಸರ್ಕಾರ ಏಕೆ ಉತ್ತೇಜನ ಕೊಡಬಾರದು ?

ಶ್ರೀ ಕೆ. ವಿ. ಶಂಕರಗೌಡ.—ರೂರ್ಸ್‌ನಲ್ಲಿ ಅಡ್ಡಿ ಇಲ್ಲವಿದ್ದರೆ ಅದನ್ನು ಪರಿಶೀಲನೆ ಮಾಡ ಬಹುದು. ಸರ್ಕಾರವವರೇ ಎಲ್ಲಾದಕ್ಕೂ ಸಾಲ ಕೊಡುವುದೂ ಸಹ ಕಷ್ಟವಾಗುತ್ತದೆ.

Sri V. SRINIVASA SHETTY.—In view of the fact that the price of Kannada Typewriters is prohibitive, will not the Government think of bringing down the price by manufacturing the Typewriter themselves or subsidising the concern ?

Sri K. V. SHANKARA GOWDA.—Government cannot become an industry for manufacturing these things.

ಶ್ರೀ ಎಂ. ವಿ. ವೆಂಕಟಪ್ಪ.—ಪ್ರತಿಯೊಂದು ಜಿಲ್ಲಾ ಕಚೇರಿಗೂ ಕನ್ನಡ ಟೈಪ್‌ರೈಟರುಗಳನ್ನು ಕೊಡುವ ವ್ಯವಸ್ಥೆಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಈಗಾಗಲೇ ಕೆಲವು ಜಿಲ್ಲಾ ಕಚೇರಿಗಳಲ್ಲಿವೆ. ಮತ್ತೆ ಕೆಲವು ಜಿಲ್ಲಾ ಕಚೇರಿಗಳಲ್ಲಿಲ್ಲ. ಅವು ಇಲ್ಲದೇ ಇರುವ ಕಡೆಗಳಲ್ಲಿ ಜಾಗ್ರತೆಯಾಗಿ ಕಳುಹಿಸುತ್ತೇವೆ.

ಶ್ರೀ ಎಂ. ಸಿ. ನರಸಿಂಹನ್.—ಎರಡನೆ ದಿವಸ ಇನ್ನೊಂದು ಪ್ರಶ್ನೆಗೆ ಉತ್ತರಕೊಡುತ್ತಾ ರಾಜ್ಯದಲ್ಲಿ ಕೇವಲ ಈಗ 73 ಟೈಪ್‌ರೈಟರುಗಳಿವೆಯೆಂದು ಹೇಳಿದಿರಿ. ಆ ಸಂಖ್ಯೆಯನ್ನು ಇನ್ನೂ ಎಷ್ಟು ಹೆಚ್ಚುಮಾಡಬೇಕೆಂದು ಪ್ಲಾನ್ ಮಾಡಿದ್ದೀರಿ ? ಸರ್ಕಾರದಲ್ಲಿ ಅದಕ್ಕೇನಾದರೂ ಯೋಜನೆ ಇದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅದರ ಬಗ್ಗೆ ಇನ್ನೂ ಅಂದಾಜು ಮಾಡಿಲ್ಲ.

ಶ್ರೀ ವಿ. ಶ್ರೀನಿವಾಸ ಶೆಟ್ಟಿ.—ಕನ್ನಡಕ್ಕೆ ಅಷ್ಟೊಂದು ಉತ್ತೇಜನ ಕೊಟ್ಟು ಬೇಕಾದಷ್ಟು ನಿರ್ಣಯಗಳನ್ನು ಮಾಡಿರುವಾಗ ಕನ್ನಡ ಟೈಪ್‌ರೈಟರುಗಳು ಇಲ್ಲದೇ ಬಹಳವಾಗಿ ತೊಂದರೆಯಾ ಗಿರುವುದರಿಂದ, ಅವುಗಳ ಅವಶ್ಯಕತೆ ಈಗ ಬಹಳ ಹೆಚ್ಚಾಗಿದೆ ಯೆಂದು ಸರ್ಕಾರ ತಿಳಿದುಕೊಳ್ಳುವು ದಕ್ಕೆ ಆಗುವುದಿಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ.—ಸರ್ಕಾರಕ್ಕೆ ಆ ವಿಷಯಗಳೂ ಗೊತ್ತಾಗಿವೆ.

ಶ್ರೀ ಎಂ. ಗೋವರ್ಧನ ರಾವ್.—ಕನ್ನಡ ಟೈಪ್‌ರೈಟರ್‌ಗೂ ಮತ್ತು ಇಂಗ್ಲಿಷ್ ಟೈಪ್‌ರೈಟ ರ್‌ಗೆ ಏನಾದರೂ ಬೆಲೆಯಲ್ಲಿ ಹೆಚ್ಚುಕಡಿಮೆ ಇದೆಯೇ ?

Sri K. V. SHANKARA GOWDA.—I don't think it is so prohibitive. It may b just the same as the English Typewriter.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಸರ್ಕಾರದ ಕೆಲಸದಲ್ಲಿರತಕ್ಕ, ಇಂಗ್ಲಿಷ್ ಟೈಪ್‌ರೈಟ ರ್‌ನಲ್ಲಿ ಟೈಪ್‌ಮಾಡ ವ ಟೈಪಿಸ್ಟ್‌ಗೆ ಏನು ಇದ್ದಾರೆಯೋ ಅವರಿಗೆ ಕನ್ನಡ ಟೈಪ್‌ರೈಟಿಂಗನ್ನೂ ಸಹ ಕಲಿಸುವುದಕ್ಕೆ ಏನಾದರೂ ಒಂದು ಇನ್‌ಸ್ಟಿಟ್ಯೂಟನ್ನು ಪ್ರಾರಂಭಮಾಡಿ, ಹೊರಗಿನವರೂ ಅಲ್ಲಿ ಬಂದು ಸೇರಿ ಅದನ್ನು ಕಲಿಯುವುದಕ್ಕೆ ಏನು ಏರ್ಪಾಡು ಮಾಡುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ.—ಮೈಸೂರು ಸೆಕೆಂಡರಿ ಎಜುಕೇಷನ್ ಅಂಡ್ ಎಗ್ಸಾಮಿನೇಷನ್ಸ್ ಬೋರ್ಡಿನವರು ಈಗಾಗಲೇ ಕನ್ನಡ ಟೈಪ್‌ರೈಟಿಂಗ್ ಪರೀಕ್ಷೆಗಳನ್ನು 1967ನೇ ನವಂಬರ್‌ನಿಂದ ನಡೆಸುತ್ತಿದ್ದಾರೆ. ಅವರು ಇನ್ನು ಮುಂದೆಯೂ ಆ ಪರೀಕ್ಷೆಗಳನ್ನು ನಡೆಸುತ್ತಾರೆ.

ಶ್ರೀ ಜಿ. ಬಿ. ಮಲ್ಲಾರಾಧ್ಯ.—ಟೈಪ್‌ರೈಟಿಂಗ್ ಕಲಿಸುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡುತ್ತೀರಾ, ಮತ್ತು ಕನ್ನಡ ಬಾರದ ಇರುವವರಿಗೆ ಕನ್ನಡವನ್ನು ಕಲಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—40 ದಿವಸಗಳ ಒಂದು ಷಾರ್ಟ್ ಕೋರ್ಸ್ ಮಾಡಬೇಕು ಎಂದು ಯೋಚನೆ ಮಾಡುತ್ತಿದೇವೆ ಮತ್ತು ಅದನ್ನು ಬೆಂಗಳೂರು, ಮೈಸೂರು ಧಾರವಾಡ ಮತ್ತು ಗುಲ್ಬರ್ಗದಲ್ಲಿ ಪ್ರಾರಂಭ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಜಿ. ಬಿ. ಮಲ್ಲಾರಾಧ್ಯ.— ಈ ಟೈಪ್‌ರೈಟಿಂಗಿನ ಕೀ ಬೋರ್ಡ್ ವಿಷಯದಲ್ಲಿ ಜಿಜ್ಞಾಸೆ ಬಂದು ಕನ್ನಡ ಟೈಪ್ ರೈಟರ್ಸ್ ಪಾಸ್ತಿ ಆಗುವುದಕ್ಕೆ ಅವಕಾಶವಾಗಿಲ್ಲ ಎಂದು ತಮ್ಮ ಅಭಿಪ್ರಾಯವೇ ?

ಶ್ರೀ ಕೆ. ಎ. ಶಂಕರಗೌಡ. —ಕೇ ಬೋರ್ಡ್ ಡಿಜ್ಞೈನ್ ಮಾಡಿ ಕೊಟ್ಟಿದೆ. ಜಿಜ್ಞಾಸೆ ಏನೂ ಇಲ್ಲ.

ಶ್ರೀ ಜೆ. ಬಿ. ಮುರ್ಳಾರಾಧ್ಯ.— ಕೈಗಾರಿಕಾ ಇರಾಜೆಯುಲ್ಲ ಸಾಲಕ್ಕೆ ಸಾಕಷ್ಟು ಪ್ರಧಾನವನ್ನು ಒದಗಿಸಿ, ಜಾಮೀನು ಕೊಡುತ್ತೀವೆ, ಡೇಟಾ ಕೊಡುತ್ತೀವೆ ಎಂದರೆ ಸಾಲಕೊಡುವುದಕ್ಕೆ ಸರ್ಕಾರಕ್ಕೆ ಏನು ಕಷ್ಟ ಇದೆ ?

ಶ್ರೀ ಕೆ. ಎ. ಶಂಕರಗೌಡ.—ಅದಕ್ಕೆ ನಿಯಮಗಳು ಅನುಕೂಲವಾಗಿಲ್ಲ ಎಂದು ನಾನು ಹೇಳಿದ್ದೇನೆ.

ಶ್ರೀ ಜೆ. ಬಿ. ಮುರ್ಳಾರಾಧ್ಯ.—ಕೈಗಾರಿಕಾ ಇರಾಜೆಯುಲ್ಲ ಅದಕ್ಕೆ ಅನುಕೂಲವಾಗುವ ಹಾಗೆ ನಿಯಮಗಳನ್ನು ಬದಲಾಯಿಸುವುದಕ್ಕೆ ಪ್ರಯತ್ನ ಮಾಡ ತ್ತೀರಾ ?

ಶ್ರೀ ಕೆ. ಎ. ಶಂಕರಗೌಡ.—ನಿಯಮವನ್ನು ಬದಲಾಯಿಸುವುದನ್ನು ಯೋಚನೆ ಮಾಡು ತ್ತೀವೆ.

Mr. CHAIRMAN.— Sri Keshav Rao Nitturkar is authorised to put question No. 46.

Proposed New Schemes for Bidar District

46. Sri KESHAV RAO NITTURKAR (Teachers' Constituency) [On behalf of SRI S. G. KHELGI (Local Authorities' Constituency)].—

Will the Minister for Finance, Planning and Commerce and Industries be pleased to state :—

the new schemes which are proposed to be started in Bidar District in view of declaration of the Bidar District as Backward area both by the Central and State Governments ?

A.—Sri RAMAKRISHNA HEGDE (Minister for Finance, Planning and Commerce and Industries).—

No new schemes are proposed to be started : while making scheme-wise and district-wise allocations under approved plan programmes, the Heads of Development Departmen s have been requested to ensure that special consider.tion is given to Bidar in view of its having been treated as the most backward distr ct.

Sri KESHAV RAO NITTURKAR.— In view of the backwardness of the Bidar District, may I know whether any special fund has been allocated either by the Centre or by the State Government ?

Sri RAMAKRISHNA HEGDE.—No, Sir. So far no special fund has been allocated either by the Centre or by the State Government.

Sri KESHAV RAO N TTURKAR.—Is it not a fact that Government have directed the Heads of the Departments to r serve certain amount of funds while making scheme-wise and District-wise allotment, for compulsory development of schemes in this District ?